**ಸಾಕ್ಷಿಗೆ ದಿನಾಂಕಃ10-11-2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**:: ಪಾಟೀ ಸವಾಲು :: ಪಿರ್ಯಾದುದಾರರ ಪರ ಶ್ರೀ. KP ವಕೀಲರಿಂದ ::**

ನಾನು ಮೂಲತಃ ಬ್ಯಾಂಕ್ ನೌಕರನಾಗಿದ್ದೆ ಎಂದರೆ ಸರಿ. ನಾನು ರಂಗೇನಹಳ್ಳಿ ಶಾಖೆಯಲ್ಲಿ 2000-2013 ವರಗೊ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ನನಗೆ ಪಿರ್ಯಾದುದಾರರ ಪರಿಚಯ ಒಳ್ಳೆಯ ರೀತಿ ಇತ್ತು ಎಂದರೆ ಸರಿ. ಸದರಿ ಸಮಯದಲ್ಲಿ ಪಿರ್ಯಾದುದಾರರು ನಮ್ಮ ಬ್ಯಾಂಕ್ ಗೆ ಬಂದು ಹೋಗುತ್ತಿದ್ದರು ಎಂದರೆ ಸರಿ. ನಾನು ಮತ್ತು ಪಿರ್ಯಾದುದಾರರು ಆ ಸಮಯದಲ್ಲಿ ಆತ್ಮೀಯರಾಗಿದ್ದೆವು ಎಂದರೆ ಸರಿಯಲ್ಲ. ನನ್ನ ಹಾಗೂ ಪಿರ್ಯಾದುದಾರರ ನಡುವೆ ಹಣಕಾಸಿನ ವ್ಯವಹಾರ ತುಂಬಾ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು 2012-13 ರಲ್ಲಿ ಹಂತಹಂತವಾಗಿ ಒಟ್ಟು ಲಕ್ಷ ರೂಪಾಯಿ ಸಾಲವನ್ನು ಪಿರ್ಯಾದುದಾರರಿಂದ ಪಡೆದಿರುತ್ತೇನೆ. 2019 ರಲ್ಲಿ ಪಿರ್ಯಾದುದಾರರಿಂದ ನಾನು 5 ಲಕ್ಷ ಸಾಲವನ್ನು ಪಡೆದಿದ್ದು ಅದನ್ನು ಅಕೌಂಟ್ ಮುಖಾಂತರ ಅವರಿಗೆ ಮರುಪಾವತಿ ಮಾಡಿರುತ್ತೇನೆ ಎಂದರೆ ಸರಿ. ನಂತರದಲ್ಲಿ 23.12.2020 ರಂದು ನನಗೆ ಹಣದ ಅವಶ್ಯಕತೆ ಇದೆ ಎಂದು ಹೇಳಿ ಪಿರ್ಯಾದುದಾರರಿಂದ 25 ಲಕ್ಷ ರೂಪಾಯಿ ಹಣವನ್ನು ಸಾಲವಾಡಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಾಲದ ಮರುಪಾವತಿಗೆ 2 ಚೆಕ್ ಗಳನ್ನು ನಾನೇ ಬರೆದು ಸಹಿ ಮಾಡಿ ಪಿರ್ಯಾದುದಾರರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಬ್ಯಾಂಕ್ ನಲ್ಲಿ ಕೆಲಸ ಮಾಡಿದ ಕಾರಣ ನನಗೆ ಚೆಕ್ ನ ವ್ಯವಹಾರದ ಬಗ್ಗೆ ಸಂಪೂರ್ಣವಾಗಿ ತಿಳಿದಿರುತ್ತದೆ ಎಂದರೆ ಸರಿ.

ಪ್ರಕರಣದ ಚೆಕ್ ಗಳು ನನಗೆ ಸೇರಿದ ಚೆಕ್ ಗಳಾಗಿರುತ್ತವೆ ಎಂದರೆ ಸರಿ. ಸದರಿ ಚೆಕ್ ಗಳಲ್ಲಿ ಬರೆದಿರುವ ವಿಚಾರಗಳನ್ನು ನಾನೇ ನಮೂದು ಮಾಡಿರುತ್ತೇನೆ ಎಂದರೆ ಸಾಕ್ಷಿಯು ಅವುಗಳಲ್ಲಿ ಇರುವ ಸಹಿ ಮಾತ್ರ ನನ್ನದಾಗಿದ್ದು ಇತರೇ ಅಂಶಗಳನ್ನು ನಾನು ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಬ್ಯಾಂಕ್ ನಲ್ಲಿ ಕೆಲಸ ಮಾಡಿದ ಕಾರಣ ಖಾಲಿ ಸಹಿ ಮಾಡಿರುವ ಚೆಕ್ ಗಳನ್ನು ಯಾರಿಗೂ ನೀಡಬಾರದೆಂಬ ಮಾಹಿತಿ ನನಗೆ ಇರುತ್ತದೆ ಎಂದರೆ ಸರಿ. ಚೆಕ್ ಪುಸ್ತಕದಲ್ಲಿ ಯಾವ ವ್ಯಕ್ತಿಗೆ ಚೆಕ್ ಗಳನ್ನು ನೀಡಿರುತ್ತೇವೆ ಎಂದು

ಬರೆದಿಟ್ಟುಕೊಳ್ಳಲು ಸ್ಲಿಪ್ ಇರುತ್ತದೆ ಎಂದರೆ ಸರಿ. ಸದರಿ ಸ್ಲಿಪ್ ಅನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದಾದರು ತೊಂದರೆ ಇರುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸದರಿ ಸ್ಲಿಪ್ ನನ್ನ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಹಾಗೂ ಪಿರ್ಯಾದುದಾರರ ನಡುವೆ ಆದ ಹಿಂದಿನ ವ್ಯವಹಾರಕ್ಕೆ ಸಂಬಂಧಪಟ್ಟ ಚೆಕ್ ಗಳು ಈ ಪ್ರಕರಣದ ಚೆಕ್ ಗಳಾಗಿರುತ್ತವೆ ಎಂದು ದುರುದ್ದೇಶದಿಂದ ಹೇಳುತ್ತಿದ್ದೇನೆಂದರೆ ಎಂದರೆ ಸರಿಯಲ್ಲ. ನಾನು ನನ್ನ ಬ್ಯಾಂಕ್ ಖಾತೆಯನ್ನು ಮುಚ್ಚುವ ಸಮಯದಲ್ಲಿ ನಾನು ಚೆಕ್ ಪುಸ್ತಕವನ್ನು ಹಿಂತಿರುಗಿಸಿರುತ್ತೇನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆದರೆ ಪಿರ್ಯಾದುದಾರರಿಗೆ ನೀಡಿದ ಚೆಕ್ ಗಳ ಬಗ್ಗೆ ಮಾಹಿತಿ ನೀಡಿರುತ್ತೇನೆ. ಅದಕ್ಕೆ ಸಂಬಂಧಪಟ್ಟ ದಾಖಲಾತಿಯನ್ನು ನ್ಯಾಯಾಲಯಕ್ಕೆ ಇವರೆಗೂ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಚೆಕ್ ಗಳು account closed ಎನ್ನುವ ಕಾರಣಕ್ಕೆ ಹಿಂದಿರುಗಿದಾಗ ವಕೀಲರ ಮುಖಾಂತರ ನೋಟೀಸ್ ಕೊಡಿಸಿರುತ್ತಾರೆ ಎಂದರೆ ಸರಿ. ಸದರಿ ನೋಟೀಸ್ ನನಗೆ ಜಾರಿಯಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಅದಕ್ಕೆ ನನ್ನ ವಕೀಲರ ಮುಖಾಂತರ ಮರು ಉತ್ತರ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮರು ಉತ್ತರವನ್ನು ನಾನು post ಮುಖಾಂತರ ಪಿರ್ಯಾದುದಾರರ ವಕೀಲರಿಗೆ ಕೊಡಿಸಿರುತ್ತೇನೆ. ಸದರಿ ನೋಟೀಸ್ ಪಿರ್ಯಾದುದಾರರಿಗೆ ಕಳುಹಿಸಿದ ಮತ್ತು ಜಾರಿಯಾದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ಮರು ಉತ್ತರ ನೀಡಿರುವುದಿಲ್ಲ, ಹೊರತಾಗಿ ಪಿರ್ಯಾದುದಾರರಿಗೆ ಸ್ವಲ್ಪ ಸಮಯದ ನಂತರ ಹಣ ನೀಡುವುದಾಗಿ ಕೇವಲ ಮೌಖಿಕವಾಗಿ ಭರವಸೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ಬ್ಯಾಂಕ್ ವ್ಯವಹಾರಗಳ ಬಗ್ಗೆ ಸಂಪೂರ್ಣ ಮಾಹಿತಿ ಇದ್ದು, ಪಿರ್ಯಾದುದಾರರಿಂದ ಪಡೆದ ಸಾಲದ ಮರುಪಾವತಿಗೆ ನೀಡಿರುವ ಚೆಕ್ ಗಳನ್ನು ದುರುದ್ದೆಶದಿಂದ ಭದ್ರತೆಗಾಗಿ ನೀಡಿರುವುದಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ಸ್ವಂತ ವೈನ್ ಶಾಪ್ ಇದ್ದು, ಅಡಿಕೆ ತೋಟ ಮತ್ತು ಮಳಿಗೆಗಳು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಿರ್ಯಾದುದಾರರು ಆರ್ಥಿಕವಾಗಿ ಸಾಮರ್ಥ್ಯವಾಗಿ ಇರುವ ವಿಚಾರ ನನಗೆ ತಿಳಿದಿದ್ದ ಕಾರಣ ಅವರಿಂದ ಸಾಲವನ್ನು

ಪಡೆದು ಈಗ ಇಲ್ಲ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪಿರ್ಯಾದುದಾರರಿಂದ ಆಗಾಗ ಹಣವನ್ನು ಪಡೆದು ಹಿಂತಿರುಗಿಸುತ್ತಿದ್ದ ಕಾರಣ ನನ್ನ ಮೇಲೆ ಇಟ್ಟಿದ ನಂಬಿಕೆಯಿಂದ ಅವರು 25 ಲಕ್ಷ ರೂಪಾಯಿ ಹಣವನ್ನು ಸಾಲವಾಗಿ ನೀಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಸಾಲದ ಭಾದ್ಯಸ್ಥಿಕೆಯಿಂದ ತಪ್ಪಿಸಿಕೊಳ್ಳುವ ದುರುದ್ದೇಶದಿಂದ ಸುಳ್ಳು ದಾಖಾಲೆಯನ್ನು ಸೃಷ್ಟಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ನಾನು 25 ಲಕ್ಷ ಹಣವನ್ನು ನೀಡಲು ಭಾದ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-
ಪ್ರಧಾನ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ತರೀಕೆರೆ.

ಸಾಕ್ಷಿಯ ಸಹಿ::